ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1411
2] ಮಾನ್ಯ ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನ ಸಭೆಯಿಂದ ಚುನಾಯಿತರಾದವರು)
3] ಉತ್ತರಿಸುವ ದಿನಾಂಕ : 23.09.2021
4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ.	2019-20ನೇ ಸಾಲಿನ ಪೊಲೀಸ್ ಇಲಾಖೆಯಲ್ಲಿನ ಪಿಸಿ ಮತ್ತು ಪಿಎಸ್ಐ ಗಳ ನೇಮಕ ಪ್ರಕ್ರಿಯೆಗೆ ಸರ್ಕಾರವು ಎಷ್ಟು ಹಣವನ್ನು ಒದಗಿಸಿದೆ; (ವಿವರ ನೀಡುವುದು)	2019-20ನೇ ಸಾಲಿನ ಪೊಲೀಸ್ ಇಲಾಖೆಯಲ್ಲಿನ ಪಿಸಿ ಮತ್ತು ಪಿಎಸ್ಐ ಗಳ ನೇಮಕ ಪ್ರಕ್ರಿಯೆಗೆ ಸರ್ಕಾರವು ಒಟ್ಟು ರೂ.1307.00 ಲಕ್ಷಗಳನ್ನು ಒದಗಿಸಿರುತ್ತದೆ.
ಆ.	ಸರ್ಕಾರವು ನೀಡಿದ ಹಣವನ್ನು ಯಾವ ಯಾವ ಪ್ರಕ್ರಿಯೆಗೆ ಬಳಕೆ ಮಾಡಲಾಗಿದೆ; (ವಿವರ ನೀಡುವುದು)	ಸರ್ಕಾರವು ನೀಡಿರುವ ಅನುದಾನವನ್ನು ಈ ಕೆಳಕಂಡ ನೇಮಕಾತಿ ಪ್ರಕ್ರಿಯೆಗೆ ವೆಚ್ಚ ಮಾಡಲಾಗಿರುತ್ತದೆ. 1) ಪಿಎಸ್ಐ ಮತ್ತು ಪಿಸಿ ಹುದ್ದೆಗಳ ದೈಹಿಕ ಪರೀಕ್ಷೆಯ ತಯಾರಿಕೆಯ ವೆಚ್ಚ. 2) ಪಿಎಸ್ಐ ಮತ್ತು ಪಿಸಿ ಹುದ್ದೆಗಳ ಲಿಖಿತ ಪರೀಕ್ಷೆಗಾಗಿ ತಗಲುವ ವೆಚ್ಚ. 3) ಪ್ರಶ್ನೆ ಪತ್ರಿಕೆ, ಓಎಂಆರ್ ಶೀಟ್ ಮತ್ತು ಉತ್ತರ ಪುಸ್ತಿಕೆ ಮುದ್ರಣ ವೆಚ್ಚ. 4) ಆನ್‌ಲೈನ್ ವೆಚ್ಚ ಅಂದರೆ ಅರ್ಜಿಗಳ ಆಹ್ವಾನ, ಕರೆ ಪತ್ರಗಳ ಬಿಡುಗಡೆ, ಅರ್ಹತಾ ಹಾಗೂ ಆಯ್ಕೆ ಪಟ್ಟಿ ತಯಾರಿಕೆಯ ವೆಚ್ಚ. 5) ಅಭ್ಯರ್ಥಿಗಳಿಗೆ ಪರೀಕ್ಷೆಯ ದಿನಾಂಕಗಳನ್ನು ತಿಳಿಸಿ ಕಳುಹಿಸುವ ಎಸ್‌ಎಂಎಸ್ ವೆಚ್ಚ. 6) ಜಾಹಿರಾತು ವೆಚ್ಚ. 7) ದೈಹಿಕ ಹಾಗೂ ಲಿಖಿತ ಪರೀಕ್ಷೆಗಳಿಗೆ ಅಳವಡಿಸುವ ಸಿಸಿಟಿವಿ ಕ್ಯಾಮರ ವೆಚ್ಚ, ಉತ್ತರ ಪತ್ರಿಕೆಯ ಮೌಲ್ಯಮಾಪಕರಿಗೆ ನೀಡುವ ಸಂಭಾವನೆಯ ವೆಚ್ಚ. 8) ಲೇಖನ ಮತ್ತು ಇನ್ನಿತರ ಅವಶ್ಯವಿರುವ ಸಾಮಾಗ್ರಿಗಳನ್ನು ಖರೀದಿಸುವ ವೆಚ್ಚ.
ಇ.	ಎಷ್ಟು ಹುದ್ದೆಗಳಿಗೆ ನೇಮಕಾತಿ ಅರ್ಜಿಯನ್ನು ಕರೆಯಲಾಗಿತ್ತು; (ವಿವರ ನೀಡುವುದು)	603 ಪಿಎಸ್ಐ ಹುದ್ದೆಗಳು ಮತ್ತು 3566 ಪಿಸಿ ಹುದ್ದೆಗಳ ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.
ಈ.	ಸದರಿ ನೇಮಕಾತಿಗೆ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿದೆ; (ವಿವರ ನೀಡುವುದು)	ಪಿಎಸ್ಐ ಹುದ್ದೆಗೆ ಸ್ವೀಕೃತವಾದ ಅರ್ಜಿಗಳ ಸಂಖ್ಯೆ : 2,37,204 ಪಿಸಿ ಹುದ್ದೆಗೆ ಸ್ವೀಕೃತವಾದ ಅರ್ಜಿಗಳ ಸಂಖ್ಯೆ : 5,73,614 ಒಟ್ಟು ಸ್ವೀಕೃತವಾದ ಅರ್ಜಿಗಳ ಸಂಖ್ಯೆ : **8,10,818**

ಉ.	ಸದರಿ ನೇಮಕಾತಿಗೆ ಸರ್ಕಾರವು ನಿಗಧಿಪಡಿಸಿದ ಅರ್ಜಿ ಶುಲ್ಕವೆಷ್ಟು; (ವಿವರ ನೀಡುವುದು)	ಸರ್ಕಾರವು ಪಿಎಸ್‌ಐ ಮತ್ತು ಪಿಸಿ ಹುದ್ದೆಗಳಿಗೆ ಈ ಕೆಳಕಂಡಂತೆ ಅರ್ಜಿ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ. 1) ಸಾಮಾನ್ಯ ಮತ್ತು ಓ.ಬಿ.ಸಿ ವರ್ಗಗಳಿಗೆ – ರೂ.250/– ಗಳು 2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ ರೂ.100/– ಗಳು
ಊ.	ಸದರಿ ನೇಮಕಾತಿ ಅರ್ಜಿ ಶುಲ್ಕದಿಂದ ಸರ್ಕಾರಕ್ಕೆ ಬಂದಿರುವ ಹಣವೆಷ್ಟು? (ವಿವರ ನೀಡುವುದು)	ಒಟ್ಟು ರೂ.13,91,92,234.80 ಗಳನ್ನು ಸರ್ಕಾರಕ್ಕೆ ಜಮೆ ಮಾಡಲಾಗಿರುತ್ತದೆ.

ಹೆಚ್‌ಡಿ 95 ಇಎಫ್‌ಎಸ್ 2021

[ಆರಗ ಜ್ಞಾನೇಂದ್ರ]
ಗೃಹ ಸಚಿವರು